## ದಿನಾಂಕ: 10/06/2022 ರ ನೋಡಲ್ ಅಧಿಕಾರಿ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಂಖ್ಯೆ-135 ಪಾದರಾಯನಪುರ ವಾರ್ಡಿನ ವಾರ್ಡ್ ಸಮಿತಿ ಸಭೆಯ ನಡವಳಿಗಳು

| ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಮತ್ತು ಸದಸ್ಯರುಗಳ ವಿವರಗಳು: | | | ಗೈರು ಹಾಜರಿದ್ದ ಇಲಾಖೆ ಸಿಬ್ಬಂಧಿಗಳು |
|---|---|---|---|
| ಕ್ರ.ಸಂ. | ಅಧಿಕಾರಿ/ ನೌಕರರ ಹೆಸರು | ಪದನಾಮ | |
| 1 | ಶ್ರೀ. ರವಿಕುಮಾರ್ | ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿ | BWSSB |
| 2 | ಶ್ರೀ. ಎಂ.ಎಸ್. ಉಮೇಶ್ | ಸಂಚಾಲಕರು ಮತ್ತು ಸಹಾಯಕ ಅಭಿಯಂತರರು,ವಾರ್ಡ್ ಸಂಖ್ಯೆ-135 | SWM |
| 3 | ಶ್ರೀ. ಮುತ್ಯಾಲು | ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ: 135 | BESCOM |
| 4 | ಶ್ರೀ. ಚಂದ್ರಶೇಖರ್.ಎನ್ | ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ: 135 | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘನತ್ಯಾಜ್ಯ) |
| 5 | ಶ್ರೀ.ಹೇಮಂತ್‌ಗೌಡ ಬಿ.ಎಲ್ | ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ-137 | ಪೋಲಿಸ್ ಇಲಾಖೆ, ಸಂಚಾರಿ ಮತ್ತು ಕಾನೂನು ಸುವ್ಯವಸ್ಥೆ |
| 6 | ಶ್ರೀ. ಶ್ರೇಯಸ್ ಶೆಟ್ಟಿ | ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ-135 | |
| 7 | ಶ್ರೀ. ಪ್ರಕಾಶ್ | ಹೆಡ್‌ಗ್ಯಾಂಗ್‌ಮೆನ್, ವಾರ್ಡ್ ಸಂಖ್ಯೆ: 135 | |
| 8 | ಶ್ರೀ. ಮುಬಿನ್ ಎಂ.ಎಸ್ | ಮಾರ್ಷಲ್, ವಾರ್ಡ್ ಸಂಖ್ಯೆ: 135 | |
| 9 | ಶ್ರೀ. ಸಯ್ಯದ್ ಬಹುದ್ದಿನ್ | ವಾರ್ಡ್ ಸದಸ್ಯರು | |
| 10 | ಶ್ರೀ. ಕಿಜೆರ್‌ಅಲಾಮ್ | ವಾರ್ಡ್ ಸದಸ್ಯರು | |
| 11 | ಶ್ರೀ. ಫೌಜಾದ್ | ವಾರ್ಡ್ ಸದಸ್ಯರು | |

ವಾರ್ಡ್ ಸಮಿತಿಯ ಉದ್ದೇಶ ಮತ್ತು ಸಭೆಯ ಮಹತ್ವವನ್ನು ತಿಳಿಸಿ ಸಭೆಯಲ್ಲಿ ಉಪಸ್ಥಿತರಿದ್ದ ಅಧ್ಯಕ್ಷರು, ಸದಸ್ಯರು ಹಾಗೂ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

1. ಹಿಂದಿನ ಸಭೆಯ ನಡವಳಿಗಳಲ್ಲಿದ್ದ ವಿಷಯಕ್ಕೆ ತೆಗೆದುಕೊಂಡ ಕ್ರಮದ ಬಗ್ಗೆ ಓದಿ ರೆಕಾರ್ಡ್ ಮಾಡಲಾಯಿತು. ದಾಖಲಿಸಲಾದ ವಿಷಯಗಳಲ್ಲಿ ಬಾಕಿ ಉಳಿದಿರುವ ಕೆಲಸ ಕಾರ್ಯಗಳನ್ನು ಜರೂರಾಗಿ ಕ್ರಮವಹಿಸುವಂತೆ ಸಂಬಂಧಿಸಿದವರಿಗೆ ಸೂಚಿಸಲಾಯಿತು.
2. **ಇಂದಿನ ಸಭೆಯಲ್ಲಿ ಮಾನ್ಯ ಅಧ್ಯಕ್ಷರ ಸಮ್ಮುಖದಲ್ಲಿ ಚರ್ಚಿಸಿದ ವಿಷಯಗಳು:**

| ಕ್ರ ಸಂ | ವಿಷಯಗಳು | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 1 | 7ನೇ ಮುಖ್ಯರಸ್ತೆಯಲ್ಲಿ ರಸ್ತೆ ಗುಂಡಿ ಮುಚ್ಚುವ ಬಗ್ಗೆ | ವಾರ್ಡ್ ವ್ಯಾಪ್ತಿಯ 7ನೇ ಮುಖ್ಯರಸ್ತೆಯಲ್ಲಿ ಮಳೆಯಿಂದ ಹಾಗೂ BWSSB ಒಳಚರಂಡಿ ದುರಸ್ಥಿ ಕಾಮಗಾರಿಗಳಿಂದ ರಸ್ತೆಗಳಲ್ಲಿ ಗುಂಡಿಗಳು ಹೆಚ್ಚಾಗಿದ್ದು, ಇದನ್ನು ಮುಚ್ಚಲು ಅಗತ್ಯ ಕ್ರಮಕೈಗೊಳ್ಳವಂತೆ ಸೂಚಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಜೆಜೆಆರ್‌ನಗರ ಉಪವಿಭಾಗ, ಸಹಾಯಕ ಅಭಿಯಂತರರು ವಾರ್ಡ್:135 |

...ಪ್ರ.ತಿ.ನೋ

| | | | |
|---|---|---|---|
| 2 | ವಾರ್ಡ್ ವ್ಯಾಪ್ತಿಯಲ್ಲಿ ನೈರ್ಮಲ್ಯ ಸ್ವಚ್ಛಗೊಳಿಸುವ ವಾಹನ ಬರದಿರುವ ಬಗ್ಗೆ. | ನೈರ್ಮಲ್ಯ ಸ್ವಚ್ಛಗೊಳಿಸುವ ವಾಹನವು ಸರಿಯಾದ ಸಮಯಕ್ಕೆ ಬರದಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರು ದೂರು ನೀಡಲಾಗಿ, ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ ಸೂಕ್ತ ಕ್ರಮವಹಿಸುವಂತೆ ಸಭೆಯಲ್ಲಿ ಸೂಚಿಸಲಾಯಿತು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣೆ, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ: 135 |
| 3 | ಮುಂಗಾರು ಮಳೆ ಮುನ್ನೆಚ್ಚರಿಕೆಯಾಗಿ ಚರಂಡಿಯಲ್ಲಿ ಹೂಳು ತುಂಬಿದ್ದರೆ ಅದನ್ನು ತೆರವುಗೊಳಿಸುವ ಬಗ್ಗೆ | ಈ ಬಗ್ಗೆ ಅಧ್ಯಕ್ಷರು ಅಗತ್ಯ ಕ್ರಮ ಕೈಗೊಳ್ಳುವಂತೆ ಕಾಮಗಾರಿ ಇಲಾಖೆ ರವರಿಗೆ ಹಾಗೂ ಹೂಳು ತೆಗೆಯಲು ಸಂಬಂಧಪಟ್ಟ SWD ಇಲಾಖೆಗೆ ಪತ್ರ ಬರೆಯಲು ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು (ಜೆಜೆಆರ್ ನಗರ), ಸಹಾಯಕ ಕಾರ್ಯಪಾಲಕ ಅಭಿಯಂತರರು (SWD) |
| 4 | ರಸ್ತೆಬದಿ ನಿಂತಿರುವ ವಾಹನಗಳ ಅಡಿಯಲ್ಲಿ ತ್ಯಾಜ್ಯ ಸಂಗ್ರಹಣೆಯಾಗಿರುವ ಬಗ್ಗೆ . | ಈ ಬಗ್ಗೆ ಸಭೆಯಲ್ಲಿ ರಸ್ತೆಬದಿ ನಿಂತಿರುವ ವಾಹನಗಳ ಅಡಿಯಲ್ಲಿ ಸಂಗ್ರಹಣೆಯಾಗಿರುವ ತ್ಯಾಜ್ಯವನ್ನು ತೆರವುಗೊಳಿಸುವಂತೆ ಅಧ್ಯಕ್ಷರು ಸೂಚಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು (ಜೆಜೆಆರ್ ನಗರ), ಸಹಾಯಕ ಕಾರ್ಯಪಾಲಕ ಅಭಿಯಂತರರು (SWM) |
| 5 | ಮಳೆಯಿಂದ ಹಾನಿಯಾಗಿರುವ ಮನೆಗಳಿಗೆ ಪರಿಹಾರ ನೀಡುವ ವರದಿಯ ಕೊರತೆಯಾಗಿರುವ ಬಗ್ಗೆ | ಈ ಬಗ್ಗೆ ಸಭೆಯಲ್ಲಿ ಚರ್ಚಿಸಿ ಮಳೆಯಿಂದ ಹಾನಿಯಾಗಿರುವ ಮನೆಗಳಿಗೆ ಪರಿಹಾರ ನೀಡುವ ವರದಿಯನ್ನು ಸಿದ್ದಪಡಿಸಿ ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. | ಕಂದಾಯ ಅಧಿಕಾರಿಗಳು, ಜೆಜೆಆರ್‌ನಗರ ವಿಭಾಗ |

ಮೇಲ್ಕಂಡ ಎಲ್ಲಾ ವಿಷಯಗಳೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ವಂದನಾರ್ಪಣೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ಮತ್ತು
ಸಹಾಯಕ ಅಭಿಯಂತರರು

ಅಧ್ಯಕ್ಷರು &
ನೋಡಲ್ ಅಧಿಕಾರಿ

ಪ್ರತಿಯನ್ನು:-

1. ಮಾನ್ಯ ಆಡಳಿತಾಧಿಕಾರಿ, ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ಜಂಟಿ ಆಯುಕ್ತರು (ಪಶ್ಚಿಮ) ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ಮುಖ್ಯ ಅಭಿಯಂತರರು (ಪಶ್ಚಿಮ) ಬಿಬಿಎಂಪಿ ರವರ ಅವಗಾಹನೆಗೆ ಸಲ್ಲಿಸಿದೆ.
5. ನೋಡಲ್ ಅಧಿಕಾರಿ, ವಾರ್ಡ್ ಸಂಖ್ಯೆ: 135 ಪಾದರಾಯನಪುರ ರವರ ಅವಗಾಹನೆಗೆ ಸಲ್ಲಿಸಿದೆ.
6. ಕಾರ್ಯಪಾಲಕ ಅಭಿಯಂತರರು, ಚಾಮರಾಜಪೇಟೆ ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಪಶ್ಚಿಮ ವಿಭಾಗ, ಬಿಬಿಎಂಪಿ ರವರ ಅವಗಾಹನೆಗೆ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಆರೋಗ್ಯ ವೈದ್ಯಾಧಿಕಾರಿ, ಚಾಮರಾಜಪೇಟೆ ವಲಯ ರವರ ಅವಗಾಹನೆಗೆ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಜೆಜೆಆರ್ ನಗರ ಉಪವಿಭಾಗ ರವರ ಅವಗಾಹನೆಗೆ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
10. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು & ಸಹಾಯಕ ಅಭಿಯಂತರರು (BWSSB) ಪಾದರಾಯನಪುರ ವಲಯ ರವರ ಅವಗಾಹನೆಗೆ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
11. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು & ಸಹಾಯಕ ಅಭಿಯಂತರರು (BESCOM) ಪಾದರಾಯನಪುರ ವಲಯ ರವರ ಅವಗಾಹನೆಗೆ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
12. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬೃಹತ್ ರಾಜಕಾಲುವೆ (SWD) ಪಶ್ಚಿಮ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
13. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘನತ್ಯಾಜ್ಯ ನಿರ್ವಹಣೆ) ಚಾಮರಾಜಪೇಟೆ ವಿಭಾಗ ರವರ ಅವಗಾಹನೆಗೆ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
14. ಸಹ ಕಂದಾಯ ಅಧಿಕಾರಿ, ಚಾಮರಾಜಪೇಟೆ ಉಪವಿಭಾಗ ರವರ ಅವಗಾಹನೆಗೆ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
15. ಪೊಲೀಸ್ ಇನ್ಸ್‌ಪೆಕ್ಟರ್, ಕಾನೂನು ಮತ್ತು ಸುವ್ಯವಸ್ಥೆ, ಚಾಮರಾಜಪೇಟೆ/ವಿ.ವಿ.ಪುರಂ/ಸೆಂಟ್ರಲ್ ಪೊಲೀಸ್ ಠಾಣೆ, ಬೆಂಗಳೂರು ಅವಗಾಹನೆಗೆ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
16. ಆರಕ್ಷಕ ನಿರೀಕ್ಷಕರು, ಜೆ.ಜೆ.ಆರ್. ನಗರ/ ಚಾಮರಾಜಪೇಟೆ ಸಂಚಾರಿ ವಿಭಾಗ, ಬೆಂಗಳೂರು ರವರ ಅವಗಾಹನೆಗೆ ಮತ್ತು ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
17. ವಾರ್ಡ್ ಸಂಖ್ಯೆ: 135 ಪಾದರಾಯನಪುರ ವಾರ್ಡ್ ಕಮಿಟಿ ಸದಸ್ಯರ ಮಾಹಿತಿಗಾಗಿ ಸಲ್ಲಿಸಿದೆ.